**M.V.C.No. 726/2024**
**PW1**

ದಿನಾಂಕ 04.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀ ಎಂ.ಆರ್ ವಕೀಲರಿಂದಃ

ಈ ಪ್ರಕರಣದಲ್ಲಿ ನಾನು  ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ದೂರಿನ  ದೃಢೀಕೃತ ನಕಲನ್ನು ನಿಪಿ–1 ಎಂದು, ಪ್ರ.ವ. ವರದಿಯ ದೃಢೀಕೃತ ನಕಲನ್ನು ನಿಪಿ–2 ಎಂದು, ಸ್ಥಳ ಪಂಚನಾಮೆ  ದೃಢೀಕೃತ ನಕಲನ್ನು ನಿಪಿ–3 ಎಂದು, ಸ್ಥಳದ ಕಚ್ಚಾ ನಕಾಶೆಯ  ದೃಢೀಕೃತ ನಕಲನ್ನು ನಿಪಿ–4 ಎಂದು, ಮೋಟಾರು ವಾಹನ ತನಿಖಾ ವರದಿಯ  ದೃಢೀಕೃತ ನಕಲನ್ನು ನಿಪಿ–5 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ–6 ಎಂದು, ಎರಡು ಕಲಂ 133 ನೋಟೀಸು ಮತ್ತು ಅದಕ್ಕೆ ನೀಡಿರುವ ಉತ್ತರಗಳ ದೃಢೀಕೃತ ನಕಲುಗಳನ್ನು ನಿಪಿ–7 ರಿಂದ 10 ಎಂದು, ಅಂತಿಮ ವರದಿಯ  ದೃಢೀಕೃತ ನಕಲನ್ನು ನಿಪಿ–11 ಎಂದು, ಡಿಸ್ಚಾರ್ಜ್  ಸಮ್ಮರಿಯನ್ನು ನಿಪಿ–12 ಎಂದು, ಆಸ್ಪತ್ರೆಯ ಅಂತಿಮ ಬಿಲ್ಲನ್ನು ನಿಪಿ–13 ಎಂದು, 4 ವೈದ್ಯಕೀಯ ಚಿಕಿತ್ಸಾ ವೆಚ್ಚ ಪಾವತಿ ರಶೀದಿಗಳನ್ನು ಒಟ್ಟಾಗಿ ನಿಪಿ–14 ಎಂದು, ಸ್ಕ್ಯಾನಿಂಗ್ ರಿಪೋರ್ಟನ್ನು ನಿಪಿ–15 ಎಂದು, ನಾಲ್ಕು ಎಕ್ಸ್ ರೇ ಗಳನ್ನು ನಿಪಿ–16 ರಿಂದ 19 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಕೆ.ಆರ್.ಆರ್ ವಕೀಲರಿಂದಃ

ನಾನು ಆ ದಿನ ರಾತ್ರಿ 11.45 ಗಂಟೆಗೆ ಸುಳ್ಯದಿಂದ ಪುತ್ತೂರಿಗೆ ಹೋಗುತ್ತಿದ್ದೆ. ಅಪಘಾತ ಸ್ಥಳದಲ್ಲಿ ರಸ್ತೆ ಎಷ್ಟು ಅಡಿ ಅಗಲ ಇತ್ತು ಎಂದು ನನಗೆ ಗೊತ್ತಿಲ್ಲ. ರಸ್ತೆಯ

ಎರಡೂ ಬದಿಯಲ್ಲಿ ಪಾದಾಚಾರಿಗಳಿಗೆ ಕಚ್ಚಾ ರಸ್ತೆ ಇದೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ರಸ್ತೆ ತಿರುವು ಇರುತ್ತದೆ. ಸದರಿ ರಸ್ತೆ ಸುಳ್ಯದ ಕಡೆಗೆ ಏರು ರಸ್ತೆ ಇರುತ್ತದೆ ಎಂದರೆ ಸರಿ.

ಅಪಘಾತಕ್ಕೂ ಮೊದಲು ನಾನು ಸುಮಾರು 10 ಮೀ ದೂರದಲ್ಲಿ ಬಸ್ಸನ್ನು ನೋಡಿರುತ್ತೇನೆ. ನಾನು ಅಪಘಾತವನ್ನು ತಪ್ಪಿಸಲು ನಾನು ನನ್ನ ಎಡಭಾಗಕ್ಕೆ ನನ್ನ ವಾಹನವನ್ನು ತೆಗೆದುಕೊಂಡಿರುತ್ತೇನೆ. ಆ ಸಮಯದಲ್ಲಿ 5-6 ಕ್ಕಿಂತ ಹೆಚ್ಚು ಎಡಭಾಗಕ್ಕೆ ಬಂದಿರುತ್ತೇನೆ. ಬಸ್ಸಿನ ಬಲಮುಂಭಾಗ ನನ್ನ ವಾಹನಕ್ಕೆ ತಾಗಿರುತ್ತದೆ. ಬಸ್ಸಿನ ಎಡಭಾಗಕ್ಕೆ ಡಾಂಬಾರು ರಸ್ತೆ ಇರಲಿಲ್ಲ. ಕಾರಣ ಬಸ್ಸು ಸಂಪೂರ್ಣ ರಸ್ತೆಯ ಎಡಭಾಗಕ್ಕೆ ಬಂದಿತ್ತು. ಬಸ್ಸು ಸರಿಯಾದ ಭಾಗದಲ್ಲಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಕಣ್ಣು, ಬಲಗಾಲಿಗೆ ಗಾಯಗಳಾಗಿರುತ್ತದೆ. ಅಪಘಾತ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸಿದ್ದೆ. ಅದು ಕೆಳಗೆ ಬಿದ್ದಿರುತ್ತದೆ. ನಾನು ಸರಿಯಾಗಿ ಹೆಲ್ಮೆಟ್ ಕಟ್ಟಿದ್ದರೆ ಅದು ಕೆಳಗೆ ಬೀಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನನಗೆ ನೆನಪಿಲ್ಲ. ಅಪಘಾತದಲ್ಲಿ ನನಗೆ ಯಾವುದೇ ಗಾಯಗಳಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಬಸ್ಸಿನ ಚಾಲಕ ತನ್ನ ತೀರಾ ಎಡಬದಿಯಲ್ಲಿ ರಸ್ತೆಯ ಚಾಲನಾ ನಿಯಮಗಳನ್ನು ಪಾಲಿಸಿಕೊಂಡು ನಿಧಾನವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದ ಎಂದರೆ ಸರಿಯಲ್ಲ. ಆರೋಪಿ ಬಸ್ಸಿನ ಚಾಲಕ ಓವರ್ ಟೇಕ್ ಮಾಡಿದ ಮತ್ತೊಂದು ಬಸ್ಸಿನ ನಂಬರ್ ನನಗೆ ಗೊತ್ತಿಲ್ಲ. ಆ ರೀತಿ ಯಾವುದೆ ಬಸ್ಸನ್ನು ಆರೋಪಿ ಓವರ್ ಟೇಕ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಬೈಕನ್ನು ನಾನೇ ಅಜಾಗರೂಕತೆಯಿಂದ ಚಾಲನೆ ಮಾಡಿ ಬಸ್ಸಿನ ಬಲಭಾಗಕ್ಕೆ ಡಿಕ್ಕಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಬಸ್ಸಿನ ಚಾಲಕನ ತಪ್ಪಿನಿಂದ ಯಾವುದೇ ಅಪಘಾತ ಮಾಡಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಯಾವುದೇ

ಪರಿಹಾರ ಪಡೆದುಕೊಳ್ಳಲು ಭಾಧ್ಯನಲ್ಲ ಎಂದರೆ ಸರಿಯಲ್ಲ. ನನಗೆ ಆಸ್ಪತ್ರೆಗೆ 4 ಲಕ್ಷ ಹಣ ಖರ್ಚಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದಿನ ಚಿಕಿತ್ಸೆಗೆ ಯಾವುದೇ ಹಣ ಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಶಾಶ್ವತ ಅಂಗಊನತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಮೇಸ್ತ್ರಿ ಕೆಲಸ ಮಾಡುತ್ತಿದ್ದೆ, ಈಗಲೂ ಅದೇ ಕೆಲಸ ಮಾಡುತ್ತಿದ್ದೇನೆ. ನಾನು ಮೇಸ್ತ್ರಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ ರೂ.20,000/- ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ ದಾಖಲೆಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಆಸ್ಪತ್ರೆಯ ಖರ್ಚುವೆಚ್ಚಗಳನ್ನು ವಿದಾಯ ಪೌಂಡೇಶನ್ ನವರು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿದಂತೆ ಪ್ರತಿವಾದಿ ಯಾವುದೇ ಪರಿಹಾರ ನೀಡಲು ಬದ್ದನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ